


# ‘ರೌಂಡ್ ಗ್ಲಾಸ್ ಸಂಸಾರ’

**ಸಂಗೀತದಲ್ಲಿ ಅಸಾಧಾರಣ ಸಾಧನೆ ಮಾಡಿದ ಕಲಾವಿದರಿಗೆ, ನೀಡುವ ಅತ್ಯುನ್ನತ ಗ್ರಾಮ್ಮಿ ಪ್ರಶಸ್ತಿ ಪಡೆದ ಸಂಗೀತ ಸಂಯೋಜಕ ರಿಕ್ಕಿ ಕೇಜ್ ‘ರೌಂಡ್ ಗ್ಲಾಸ್ ಸಂಸಾರ’ ಉತ್ಸವವನ್ನು ಬೆಂಗಳೂರಿನಲ್ಲಿ ಆಯೋಜಿಸಿದ್ದಾರೆ. ಇದು ಸಂಗೀತ, ಚಿತ್ರಕಲೆ ಹಾಗೂ ಸಿನಿಮಾಗಳ ಅದ್ಭುತ ಸಂಗಮವಾಗಿದ್ದು, ಎಲ್ಲದರಲ್ಲೂ ಪರಿಸರ ಕಾಳಜಿ ಜಾಗೃತವಾಗಿದೆ.**

■ ಉಮಾ ಅನಂತ್

**2015**ರ ಡಿಸೆಂಬರ್‌ನಲ್ಲಿ ವಿಶ್ವಸಂಸ್ಥೆಯ ಪ್ರತಿಷ್ಠಿತ ವೇದಿಕೆಯಲ್ಲಿ ಒಂದು ವಿಭಿನ್ನ ಹಾಗೂ ವಿಶಿಷ್ಟ ಸಂಗೀತ ಆಲ್ಬಂ ಅನ್ನು ಬಿಡುಗಡೆ ಮಾಡಲಾಯಿತು. ‘ಶಾಂತಿ ಸಂಸಾರ’ ಹೆಸರಿನ ಆಲ್ಬಂ ಅನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷರಾಗಿದ್ದ ಫ್ರಾಂಕೋಸ್ ಹೊಲ್ಲಾಂಡ್ ವಿಶ್ವನಾಯಕರ ಸಮ್ಮುಖದಲ್ಲಿ ಬಿಡುಗಡೆ ಮಾಡಿದ್ದರು. ಇದರಲ್ಲಿ ವಿಶ್ವದ 40 ರಾಷ್ಟ್ರಗಳ ಗಾಯಕರು/ ವಾದಕರು ಸೇರಿ ಒಟ್ಟು 500 ಸಂಗೀತ ಕಲಾವಿದರು ಭಾಗವಹಿಸಿದ್ದು ವಿಶೇಷ. ಇದರಲ್ಲಿನ ಸಂಗೀತ, ವೀಡಿಯೊ ಛಾಯಾಗ್ರಹಣ ಎಲ್ಲವೂ ಅದ್ಭುತವಾಗಿದೆ. ಈ ಆಲ್ಬಂಗೆ ಸಂಗೀತ ಸಂಯೋಜನೆ ಮಾಡಿದವರು ಬೆಂಗಳೂರಿನವರಾದ ರಿಕ್ಕಿ ಕೇಜ್. ಸಂಗೀತ ಸಾಧನೆಗಾಗಿ ನೀಡುವ ಪ್ರತಿಷ್ಠಿತ ಗ್ರಾಮ್ಮಿ ಪ್ರಶಸ್ತಿಯೂ ಇವರಿಗೆ ಒಲಿಯಿತು. ರಿಕ್ಕಿ ಕೇಜ್ ಅಂತರರಾಷ್ಟ್ರೀಯ ಖ್ಯಾತಿಯ ಭಾರತೀಯ ಸಂಗೀತ ಸಂಯೋಜಕ ಹಾಗೂ ಪರಿಸರವಾದಿ.

ಪ್ರಕೃತಿದತ್ತವಾದ ನಾದ ತರಂಗದಲ್ಲಿ ಸಂಗೀತದ ಲಯ ಅಡಗಿದೆ. ಸ್ವರ, ಲಯ, ಭಾವ, ಸ್ಥಾಯಿ, ನಡೆ.. ಎಲ್ಲವೂ ಒಂದಕ್ಕೊಂದು ಪೂರಕ. ಇದಕ್ಕೆಲ್ಲ ಪರಿಸರ–ಪ್ರಕೃತಿಯೇ ಪ್ರೇರಕ ಶಕ್ತಿ. ಪ್ರಕೃತಿಗೂ ಸಂಗೀತಕ್ಕೂ ಅವಿನಾಭಾವ ಸಂಬಂಧವಿದೆ. ಹೀಗಾಗಿ ಪರಿಸರ–ಸಂಗೀತ ಎಲ್ಲದರೊಳಗೊಂದಾಗಬೇಕು ಎಂಬುದು ರಿಕ್ಕಿ ಕೇಜ್ ಅವರ ಅಭಿಲಾಷೆ.

ಸದ್ಯ ರಿಕ್ಕಿ ಕೇಜ್ ಬೆಂಗಳೂರಿನಲ್ಲಿ ‘ರೌಂಡ್‌ಗ್ಲಾಸ್ ಸಂಸಾರ ಉತ್ಸವ’ ಎಂಬ ಹೊಸ ಪರಿಕಲ್ಪನೆಯ, ಸಂಗೀತ, ಚಿತ್ರಕಲೆ ಹಾಗೂ ಸಿನಿಮಾವನ್ನೊಳಗೊಂಡ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ನಡೆಸಲು ಸಜ್ಜಾಗಿದ್ದಾರೆ. ಇಲ್ಲೂ ಅವರು ಒತ್ತಾಸೆ ನೀಡಿದ್ದು ಪರಿಸರ ಪ್ರೇಮಕ್ಕೆ ಎಂಬುದು ಗಮನಾರ್ಹ.

ಸಂಗೀತ ಸಂಯೋಜಕ ರಿಕ್ಕಿ ಕೇಜ್ (ಹುಟ್ಟಿದ್ದು ಆಗಸ್ಟ್ 5, 1981 ಅಮೆರಿಕ ಉತ್ತರ ಕರೊಲಿನಾದಲ್ಲಿ) ಜಾಗತಿಕ ಮಟ್ಟದಲ್ಲಿ ಸಂಗೀತ, ಲಲಿತ ಕಲೆಗಳ ಮೂಲಕ ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡವರು. ಸದ್ಯ ಬೆಂಗಳೂರಿನ ಇಂದಿರಾ ನಗರದಲ್ಲಿ ನೆಲೆಸಿರುವ ರಿಕ್ಕಿ ಅವರಿಗೆ ಸಂಗೀತ ಮನೆತನದಿಂದ ಬಂದದ್ದಲ್ಲ. ಅವರೇ ಹೇಳುವ ಹಾಗೆ ‘ಮ್ಯೂಸಿಕ್ ಈಸ್ ಆ್ಯನ್ ಆಕ್ಸಿಡೆಂಟಲ್ ಫಾರ್ ಮಿ..’. ಏಕೆಂದರೆ ಇವರು ಓದಿದ್ದು ದಂತ ವೈದ್ಯಕೀಯ ಪದವಿ. ಸಂಗೀತವನ್ನು ಹವ್ಯಾಸವಾಗಿ ತೆಗೆದುಕೊಂಡವರು ಮುಂದೆ ಅದನ್ನೇ ವೃತ್ತಿಯನ್ನಾಗಿ